# ಹಸುಗಳ ಕರೆವ ಧ್ವನಿ ಕರುಗಳ ಪಿಡಿದು

(ಗೋಪಿಗೀತ ಸುಳಾದಿ)

1. **Ref.:** Shri Purandara Dasara Sahitya Part – 4, Krishna Leele, edited by Shri Betageri Krishna Sharma and Shri Bengeri Huchhu Rayaru, page No. 82.
2. **Ref.:** Samagra Dasa Sahitya, Samputa 4, published by Kannada & Culture Dept, Govt of Karnataka, Bengaluru, page No. 139.
3. **Note:** Lyrics given here are as per Ref. 1. The wordings in Ref. 2 are same as in Ref. 1. This suladi is not available in the reference book by Sri Pavanje Guru Rao

**ಧ್ರುವ ತಾಳ**

ಹಸುಗಳ ಕರೆವ ಧ್ವನಿ ಕರುಗಳ ಪಿಡಿದು ಬಿಡುವ ಧ್ವನಿ
ರಶನೆ–ಕಂಕಣಗಳನಿಟ್ಟ ಯಶೋದೆ ಮೊಸರ ಕಡೆವ ಧ್ವನಿ
ಪಯೋಭಿಶಯನನ [ಒಸೆದು] ಪಾಡುವ ಧ್ವನಿ
ಸೆಳೆಮಂಚದ ಮೇಲೆ ಯೋಗ ನಿದ್ರೆಯೊಳಿಪ್ಪ
ಕುಸುಮಾಕ್ಷನು ಉಪ್ಪವಡಿಸಲು ಮೈಮುರಿದೆದ್ದು
ಬಂದು ಗೋಪಿಯ ನಿರಿಯ ಪಿಡಿದುಕೊಂಡು
ಮೊಲೆಯ ಕೊಡು ಹಸಿದೆನೆಂದೆಂಬ ಹರಿಯನೆತ್ತಿಕೊಂಡು
ತೊಡೆಯ ಮೇಲಿಟ್ಟು ಹನಿವ ಮೊಲೆಯೂಡಲು
ಆಡುವ ಕೃಷ್ಣರಾಯ ಬಿಡದೆ ಭಕುತ ಜನರ ಸಲಹುವ
ಸುಕುಮಾರಕ ಪುರಂದರ ವಿಠಲ ॥ ೧ ॥

**ಮಟ್ಟೆ ತಾಳ**

ಪೊಂಬಣ್ಣ-ದಂಬರವನುಟ್ಟು ಕಂಬಳಿಯ ಹೊದ್ದಿರೆ
ಅಂಬುಜ ಸಂಭವ ಆಗಮ ಉಚ್ಚರಿಸೆ
ಕೊಂಬು-ಕೊಳಲು ತುತ್ತೂರಿಗಳು ಊದುತಿರೆ
ಅಂಬುಜ ಸಂಭವ ಎಂಬವನರಿಯೆ ನೀನು
ಪುರಂದರ ವಿಠಲ ॥ ೨ ॥

**ಅಟ ತಾಳ**

ಕೋಗಿಲೆಯಂತೆ ಕೂಗುವೆಯೊಮ್ಮೆ
ಗಿಳಿಯಂತೆ ಮಾತನಾಡುವೆಯೊಮ್ಮೆ
ತುಂಬಿಯಂತೆ ಪಾಡುವೆಯೊಮ್ಮೆ
ನವಿಲಿನಂತೆ ನಲಿದಾಡುವೆಯೊಮ್ಮೆ
ಒಮ್ಮೆ ಕೊಕ್ಕರನಂತೆ ಕೊಕ್ಕಿ, ಒಮ್ಮೆ ಗೂಳಿಯಂತೆ ಗುಟುರಿ
ಒಮ್ಮೆ ಗೋವಳರಂತೆ ಗೋಲಿಯಾಡುವೆ
ಆವ ಲೀಲೆಯೊ ಪುರಂದರ ವಿಠಲ ॥ ೩ ॥

**ರೂಪಕ ತಾಳ**

ಕಂಡೆವು ನಿನ್ನ ನೆಲೆ ಕೃಷ್ಣ ಮೊಸರ-ಬಿಸಳಿಗೆ
ಬೆಣ್ಣೆಯ ಗುಂಡಿಗೆವೆರಸಿ ಒಲುಮೆಯಿಂದ
ಕುಶಲವಾಡಿ ಮೀಸಲಳಿವೆ ಕಾಂಬಕಾಂಬವರಿಗೆ ಬೀರುವೆ
ಅಂಜುವವೆ ಪಾಂಡುರಂಗ ಪುರಂದರ ವಿಠಲ
ದೇವತೆಗಳ ಮಾನಿ ॥ ೪ ॥

**ಝಂಪೆ ತಾಳ**

ವಿತ್ತದಹಂಕಾರ-ಮಮಕಾರದಿಂದ
ಸುತ್ತಿ ಸುತ್ತಿ ಸುಣ್ಣವಾಗಿರೆ ಕಂಡು
ಇತ್ತ ಬಾ ಇತ್ತ ಬಾ ಎಂದು
ಉತ್ತರಿಸುವೆ ಸಂಸಾರ ಸಾಗರವ
ಭೃತ್ಯನಪ್ಪೆ ಪುರಂದರ ವಿಠಲ
ಇತ್ತ ಬಾ ॥ ೫ ॥

**ಆದಿ ತಾಳ**

ಆವ ತೀರಥದಲಿ ಮುಳುಗಿದೆನೊ ನಾ-
ನಾವ ಕ್ಷೇತುರಗಳ ಮೆಟ್ಟಿದೆನೊ ನಾ-
ನಾವ ಕ್ರತುವ ನೆರೆ ಮಾಡಿದೆನೊ ನಾ-
ನಾವ ದೇವತೆಗಳ ಭಜಿಸಿದೆನೊ
ದೇವ ಪುರಂದರ ವಿಠಲನ
ಪಾವನ ಮೂರ್ತಿಯ ಕಂಡೆ ನಾನು ॥ ೬ ॥

**ಏಕ ತಾಳ**

ಉಪಾಧಿಯಿಂದ ನಿನ್ನ ಭಜಿಸುವೆ ನಿ-
ರುಪಾಧಿ ನೀನು ಶಿವನ ನಾನರಿಯದ ಕಾರಣ
ಅಪಾರ ಮಹಿಮನೆ ಉಪಾಧಿಯಳಿದು ನಿ-
ರುಪಾಧಿಸೆ ಶಿವನ ಭಜಿಪಂತೆ ಮಾಡಯ್ಯ

ಅಪವರ್ಗವಿಪದನೀಯ ಜಗದೇಕ ಪಾಲ
ಪುರಂದರ ವಿಠಲ ರಾಯ ॥ ೭ ॥

**ಜತೆ**

ಎನ್ನ ತನು ಮನ ಧನವಿಂದು ಪಾವನವೈಯ
ನಿನ್ನ ಸಾರಿದೆ ಪುರಂದರ ವಿಠಲ ॥ ೮ ॥

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿ:**

ಈ ಸುಳಾದಿಯಲ್ಲಿ ದಾಸರು ಬಾಲಕೃಷ್ಣನ ಲೀಲೆಗಳನ್ನು ವಿವಿಧ ರೀತಿಯಲ್ಲಿ ಬಣ್ಣಿಸಿ ಹೇಳಿದ್ದಾರೆ.

೧. **ರಶನೆ** = ನಡುಗಜ್ಜೆ

**ಪಯೊಬ್ಧಿ ಶಯನ** = ಕ್ಷೀರ ಸಾಗರ ಶಯನ

೨. **ಕಕ್ಕಿ** = ಕೊಕ್ಕೆಂದು ಸಪ್ಪುಳ ಮಾಡಿ

**ಬಿಸಳಿಗೆ** = ಪಾತ್ರೆಯ ಒಂದು ಜಾತಿ

**ಕುಶಾಲವಾಡಿ** = ವಿನೋದ ಮಾತಾಡಿ

೫. **ಉತ್ತರಿಸು** = ದಾಟಿಸು

೬. **ಕ್ರತು** = ಯಜ್ಞ

೭. **ಉಪಾಧಿ** = ಅಜ್ಞಾನದ ಆವರಣ

**ವಿಪದ** = ವಿಶೇಷವಾದ ಪದ (ಸ್ಥಾನ)

**ಶಿವ** = ಮಂಗಲಕರನಾದ ಪರಮಾತ್ಮ

**ವಿ.ಸೂ.: -** ದ್ವೈತ ತತ್ವಜ್ಞಾನದಲ್ಲಿ ಪರಮಾತ್ಮನನ್ನು ಬಿಟ್ಟು ಉಳಿದ ಎಲ್ಲಾ ದೇವತೆಗಳೂ ಸೋಪಾಧಿಕರು.

**Classification:** Suladi

**Name of Suladi:** Gopi Geeta suladi
**Ankita:** purandara vittala
**Location:** NA
**Category:** Krishna Leele
**Sub-Category:** govu, yashode, halu, Krishna, Vishnu, mancha, nidde, gopi, kolalu, kogile, gili, dumbi, navilu, kokkare, ADu, benne, bhaya, panduranga, rokka, samsara, tirtha, bhajane, deva, shiva, mana, deha,
**Pravachana:** NA
**Explanation:** NA